# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 1456 |
| **ಸದಸ್ಯರ ಹೆಸರು** | ಶ್ರೀ ಹೆಚ್.ಎಸ್. ಗೋಪಿನಾಥ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 10.03.2022 |

**ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾಯಿತ**

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಇರುವ ಪ್ರಸ್ತುತ ಕೆರೆಗಳ ಸಂಖ್ಯೆ. ಎಷ್ಟು; | ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ 86 ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ 498 ಕೆರೆಗಳು ಇರುತ್ತವೆ. ವಿವರ ಕೆಳಕಂಡಂತಿದೆ.<br><br>**ತಾಲ್ಲೂಕು** \| **ಗ್ರಾ.ಪಂ. ಸಂಖ್ಯೆ** \| **ಕೆರೆಗಳ ಸಂಖ್ಯೆ**<br>ಆನೇಕಲ್ \| 28 \| 226<br>ಬೆಂ.ಪೂರ್ವ \| 11 \| 28<br>ಬೆಂ.ಉತ್ತರ \| 11 \| 45<br>ಬೆಂ.ದಕ್ಷಿಣ \| 18 \| 18<br>ಯಲಹಂಕ \| 18 \| 85<br>**ಒಟ್ಟು** \| **86** \| **498** |
| ಆ. | ಬೆಂಗಳೂರು ನಗರ ಜಿಲ್ಲೆಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಳಚೆ ನೀರು ಸಂಸ್ಕರಣ ಘಟಕದ ಯೋಜನೆಗಳೇನು; | ಬೆಂಗಳೂರು ನಗರ ಜಿಲ್ಲೆಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಜಲಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ವಿವರ ಅನುಬಂಧ-1 ರಲ್ಲಿ ನೀಡಿದೆ.<br><br>**ನಿರ್ಮಾಣ ಹಂತದಲ್ಲಿರುವ ತ್ಯಾಜ್ಯ ಶುದ್ಧೀಕರಣ ಘಟಕಗಳು:**<br><br>1) ಯಲಹಂಕ ಬಳಿಯಲ್ಲಿರುವ ಪುಟ್ಟೇನಹಳ್ಳಿಯಲ್ಲಿ ರೂ.24.51 ಕೋಟಿ ಮೊತ್ತದಲ್ಲಿ ದಿನಂಪ್ರತಿ 7 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯನೀರು ಸಂಸ್ಕರಣ ಘಟಕವನ್ನು ಕರ್ನಾಟಕ ರಾಜ್ಯ ಮಾಲೀನ್ಯ ನಿಯಂತ್ರಣ ಮಂಡಳಿಯವರ ಅನುದಾನ ಪಡೆದು ನಿರ್ಮಿಸಲಾಗುವುದು. ಈ ಕಾಮಗಾರಿಯನ್ನು 2022 ರ ಅಂತ್ಯದಲ್ಲಿ ಪೂರ್ಣ ಮಾಡಲಾಗುವುದು.<br>2) ಕಗ್ಗದಾಸಪುರ ಕೆರೆಯ ಬಳಿ ರೂ.17.90 ಕೋಟಿ ಮೊತ್ತದಲ್ಲಿ ದಿನಂಪ್ರತಿ 5 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯನೀರು ಸಂಸ್ಕರಣ ಘಟಕವನ್ನು ಕರ್ನಾಟಕ ರಾಜ್ಯ ಮಾಲೀನ್ಯ ನಿಯಂತ್ರಣ ಮಂಡಳಿಯವರ ಅನುದಾನ ಪಡೆದು ನಿರ್ಮಿಸಲಾಗುವುದು. ಈ ಕಾಮಗಾರಿಯನ್ನು 2022 ರ ಅಂತ್ಯದಲ್ಲಿ ಪೂರ್ಣ ಮಾಡಲಾಗುವುದು.<br>3) ಜೈಕಾ ಸಂಸ್ಥೆಯ ಹಣಕಾಸಿನ ನೆರವಿನೊಂದಿಗೆ ರೂ.1014.00 ಕೋಟಿ ವೆಚ್ಚದಲ್ಲಿ ಮೂರು |

ಕಾಮಗಾರಿಗಳಿಂದ 110 ಹಳ್ಳಿಗಳಿಗೆ ಒಳಪಡುವ ಪ್ರದೇಶಗಳಲ್ಲಿ ಉಪ ಮುಖ್ಯ ಒಳಚರಂಡಿ ಕೊಳವೆ ಹಾಗೂ ಟ್ರಂಕ್ ಸೀವರ್ ಅಳವಡಿಸುವುದರೊಂದಿಗೆ ಕೆಳಕಂಡ 14 ತ್ಯಾಜ್ಯ ನೀರು ಸಂಸ್ಕರಣ ಘಟಕ (ಎಸ್.ಟಿ.ಪಿ) ಗಳನ್ನು ಸ್ಥಾಪಿಸುವ ಯೋಜನೆಯನ್ನು ಜುಲೈ 2021 ರಲ್ಲಿ ಕೈಗೊಳ್ಳಲಾಗಿದೆ. ವರ್ತೂರಿನಲ್ಲಿ ಅವಶ್ಯವಿರುವ ಪ್ರದೇಶವು ದೊರಕದ ಕಾರಣ, ವರ್ತೂರು ಎಸ್.ಟಿ.ಪಿ. ಹಾಗೂ ಹಗದೂರು ಐ.ಎಸ್.ಪಿ.ಎಸ್. ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದ ಇಲ್ಲಾ ಕಾಮಗಾರಿಗಳು ನಿರ್ಮಾಣದ ಹಂತದಲ್ಲಿದ್ದು, ಕಾಮಗಾರಿಗಳನ್ನು 2024 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

| ಕ್ರಸ | ಎಸ್.ಟಿ.ಪಿ. ನಿರ್ಮಾಣದ ಪ್ರದೇಶ | ಸಾಮರ್ಥ್ಯ (ಎಂ.ಎಲ್.ಡಿ) |
|---|---|---|
| 1 | ಜಕ್ಕೂರು | 7 |
| 2 | ಯಲಹಂಕ ಕೆರೆ | 6 |
| 3 | ದೊಡ್ಡಬೆಟ್ಟಹಳ್ಳಿ | 7 |
| 4 | ಬಿಲಿಶಿವಾಲೆ | 17 |
| 5 | ಪಿಲ್ಲಗಾನಹಳ್ಳಿ | 4 |
| 6 | ತಲಘಟ್ಟಪುರ | 5 |
| 7 | ಸೋಂಪುರ | 8 |
| 8 | ಹೆಮ್ಮಿಗೆಪುರ | 13 |
| 9 | ನಾಗಸಂದ್ರ | 9 |
| 10 | ಕರಿಹೋಬನಹಳ್ಳಿ | 10 |
| 11 | ಹೇರೋಹಳ್ಳಿ | 3 |
| 12 | ಹೊಸಹಳ್ಳಿ | 6 |
| 13 | ಚಿಕ್ಕಬಾಣಾವರ | 4 |
| 14 | ವರ್ತೂರು | 25 |

**ತ್ಯಾಜ್ಯನೀರು ಶುದ್ದೀಕರಣ ಘಟಕಗಳ ಹೊಸ ಯೋಜನೆಗಳು:**

1) ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶದ ಮೇರೆಗೆ ಕೆಲವು ಹಳೆಯ ತ್ಯಾಜ್ಯ ನೀರು ಶುದ್ದೀಕರಣ ಘಟಕಗಳ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳುವ ಅವಶ್ಯಕತೆಯಿದೆ. ಪ್ರಾರಂಭದಲ್ಲಿ ಬೆಳಂದೂರು ಮತ್ತು ವರ್ತೂರು ಕೆರೆಯ ಮಾಲಿನ್ಯವನ್ನು ತಡೆಗಟ್ಟಲು ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿರುವ ಹಳೆಯ ತ್ಯಾಜ್ಯ ನೀರಿನ ಶುದ್ದೀಕರಣ ಘಟಕಗಳ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಈ ಯೋಜನೆಗೆ ಸ್ವೀಕರಿಸಿರುವ ಟೆಂಡರ್‌ಗಳ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈ ಯೋಜನೆಯನ್ನು 2 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.
2) ಹೆಬ್ಬಾಳದ ಬಳಿ ಇರುವ 60 ಎಂ.ಎಲ್.ಡಿ. ಎಸ್.ಟಿ.ಪಿ.ಯ ಬದಲು ಹೊಸ ಎಸ್.ಟಿ.ಪಿ.ಯ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲಾಗುವುದು. ಈ ಯೋಜನೆಗೆ ಸಮಾಲೋಚಕರು

<table>
<tr>
<td></td>
<td></td>
<td>ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಲಾಗುತ್ತಿದೆ.<br>3) ಹೊರಮಾವು ಬಳಿ 60 ಎಂ.ಎಲ್.ಡಿ. ಹೊಸ ಎಸ್.ಟಿ.ಪಿ.ಯ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲಾಗುವುದು. ಆದ್ದರಿಂದ ಈ ಯೋಜನೆಗೆ ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚಕರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>4) ರಾಚೇನಹಳ್ಳಿ ಕೆರೆಯ ಬಳಿಯಿರುವ ಮಹಾತ್ಮಗಾಂಧಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿ 10 ಎಂ.ಎಲ್.ಡಿ. ಎಸ್.ಟಿ.ಪಿ.ಯನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದೆ. ರೂ.45.30 ಕೋಟಿ ಅಂದಾಜು ಮೊತ್ತದ ಈ ಯೋಜನೆಗೆ ಅನುದಾನ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಕೆಳಕಂಡ 3 ಗ್ರಾಮ ಪಂಚಾಯಿತಿಗಳಲ್ಲಿ ಕೊಳಚೆ ನೀರು ಸಂಸ್ಕರಣ ಘಟಕದ ನಿರ್ಮಾಣ ಕಾಮಗಾರಿಗಳಿಗೆ 2019-20ನೇ ಸಾಲಿನ ರೂರ್ಬನ್ ಯೋಜನೆಯಡಿಯಲ್ಲಿ ಚಾಲನೆ ನೀಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>
<table>
<tr><th>ಗ್ರಾಮ ಪಂಚಾಯಿತಿ</th><th>ಗ್ರಾಮ</th><th>ಅಂದಾಜು ಮೊತ್ತ (ರೂ.ಲಕ್ಷ)</th></tr>
<tr><td>ಹುಲಿಮಂಗಲ</td><td>ಹುಲಿಮಂಗಲ</td><td>200.00</td></tr>
<tr><td>ಹೆನ್ನಾಗರ</td><td>ಯಾರಂಡಹಳ್ಳಿ & ಕಾಚನಾಯಕನಹಳ್ಳಿ</td><td>200.00</td></tr>
<tr><td>ಹೆನ್ನಾಗರ</td><td>ಹೆನ್ನಾಗರ, ಹೊಸಹಳ್ಳಿ, ರಾಜಪುರ & ಮಾಸ್ತೇನಹಳ್ಳಿ</td><td>200.00</td></tr>
</table>
</td>
</tr>
<tr>
<td>ಇ.</td>
<td>ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಇದುವರೆವಿಗೂ ಸರ್ಕಾರದಿಂದ ಒತ್ತುವರಿಯಾದ ಕರೆಗಳ ಸಂಖ್ಯೆ. ಹಾಗೂ ಒತ್ತುವರಿಯಿಂದ ತೆರವುಗೊಳಿಸಿದ ಕೆರೆಗಳ ಮತ್ತು ಜೀವಂತವಿರುವ ಕೆರೆಗಳ ಸಂಖ್ಯೆ ಎಷ್ಟು?</td>
<td>ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಇದುವರೆವಿಗೂ ಒತ್ತುವರಿಯಾದ ಕರೆಗಳ ಸಂಖ್ಯೆ. ಹಾಗೂ ಒತ್ತುವರಿಯಿಂದ ತೆರವುಗೊಳಿಸಿದ ಕೆರೆಗಳ ಮತ್ತು ಜೀವಂತವಿರುವ ಕೆರೆಗಳ ವಿವರ ಕೆಳಕಂಡಂತಿದೆ:<br>
<table>
<tr><th>ತಾಲ್ಲೂಕು</th><th>ಒತ್ತುವರಿ ಯಾಗಿರುವ ಕೆರೆಗಳ ಸಂಖ್ಯೆ</th><th>ಒತ್ತುವರಿ ತೆರವು ಗೊಳಿಸಿರುವ ಸಂಖ್ಯೆ</th><th>ಜೀವಂತ ವಿರುವ ಕೆರೆಗಳ ಸಂಖ್ಯೆ</th></tr>
<tr><td>ಆನೇಕಲ್</td><td>188</td><td>63</td><td>226</td></tr>
<tr><td>ಬೆಂ.ಪೂರ್ವ</td><td>23</td><td>23</td><td>28</td></tr>
<tr><td>ಬೆಂ.ಉತ್ತರ</td><td>29</td><td>22</td><td>45</td></tr>
<tr><td>ಬೆಂ.ದಕ್ಷಿಣ</td><td>14</td><td>11</td><td>114</td></tr>
<tr><td>ಯಲಹಂಕ</td><td>36</td><td>34</td><td>41</td></tr>
<tr><td>ಒಟ್ಟು</td><td>290</td><td>153</td><td>454</td></tr>
</table>
</td>
</tr>
<tr>
<td>ಈ.</td>
<td>ಇದುವರೆವಿಗೂ ಪುನ:ಶ್ಚೇತನಗೊಳಿಸಿದ ಕೆರೆಗಳೆಷ್ಟು? (ಅವುಗಳ ವಿವರ</td>
<td>ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಒಟ್ಟು 40 ಕೆರೆಗಳನ್ನು ಪುನ:ಶ್ಚೇತನ ಗೊಳಿಸಲಾಗಿದೆ, ವಿವರ ಕೆಳಕಂಡಂತಿದೆ..</td>
</tr>
</table>

<table>
<tr>
<td></td>
<td>ನೀಡುವುದು)</td>
<td>
<table>
<tr><th>ತಾಲ್ಲೂಕು</th><th>ಪುನಶ್ಚೇತನಗೊಳಿಸಿರುವ ಕೆರೆಗಳ ಸಂಖ್ಯೆ.</th></tr>
<tr><td>ಆನೇಕಲ್</td><td>13</td></tr>
<tr><td>ಬೆಂ.ಪೂರ್ವ</td><td>10</td></tr>
<tr><td>ಬೆಂ.ಉತ್ತರ</td><td>1</td></tr>
<tr><td>ಬೆಂ.ದಕ್ಷಿಣ</td><td>3</td></tr>
<tr><td>ಯಲಹಂಕ</td><td>13</td></tr>
<tr><td>ಒಟ್ಟು</td><td>40</td></tr>
</table>
</td>
</tr>
</table>

ಸಂಖ್ಯೆ: ಗ್ರಾಅಪ:15ನೇವಿಸ:200/73:ಆರ್.ಆರ್.ಸಿ:2021

**(ಕೆ.ಎಸ್.ಈಶ್ವರಪ್ಪ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

# ಅನುಬಂಧ-1

| ಕ್ರಸಂ | ಸಂಸ್ಕರಣ ಘಟಕದ ಸ್ಥಳ | ಸಂಸ್ಕರಣ ಘಟಕದ ಸಾಮರ್ಥ್ಯ ದಿನಂಪ್ರತಿ ಪ್ರತಿಶತ ಲಕ್ಷ ಲೀಟರ್‌ಗಳಲ್ಲಿ |
|---|---|---|
| 1 | ವೃಷಭಾವತಿ ಕಣಿವೆ | 180 |
| 2 | ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ | 218 |
| 3 | ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ | 30 |
| 4 | ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ | 150 |
| 5 | ಹೆಬ್ಬಾಳ | 100 |
| 6 | ಮಲ್ಲತಹಳ್ಳಿ | 5 |
| 7 | ಕೆಂಪಾಂಬುದಿ | 1 |
| 8 | ಯಲಹಂಕ | 10 |
| 9 | ಮೈಲಸಂದ್ರ | 75 |
| 10 | ನಾಗಸಂದ್ರ | 20 |
| 11 | ಜಕ್ಕೂರು | 15 |
| 12 | ಕೆ.ಆರ್.ಪುರಂ | 20 |
| 13 | ಕಾಡಬೀಸನಹಳ್ಳಿ | 50 |
| 14 | ರಾಜಾಕೆನಾಲ್ | 40 |
| 15 | ಕಬ್ಬನ್ ಪಾರ್ಕ್ | 4 |
| 16 | ಲಾಲ್ ಭಾಗ್ | 1.5 |
| 17 | ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆ | 60 |
| 18 | ರಾಜಾಕೆನಾಲ್ | 40 |
| 19 | ನಾಗಸಂದ್ರ | 20 |
| 20 | ಚಿಕ್ಕಬಾಣಾವರ | 5 |
| 21 | ಕಾಡುಗೋಡಿ | 6 |
| 22 | ಬೆಳ್ಳಂದೂರು ಅಮಾನಿಕೆರೆ | 90 |
| 23 | ಹೊರಮಾವು ಅಗರ | 20 |
| 24 | ದೊಡ್ಡಬೆಲೆ | 20 |
| 25 | ಎಲೆಮಲ್ಲಪ್ಪಚೆಟ್ಟಕೆರೆ | 15 |
| 26 | ಕೆಂಗೇರಿ | 60 |
| 27 | ಹಲಸೂರು | 2 |
| 28 | ದೊಡ್ಡಬೆಲೆ | 40 |
| 29 | ಸಾರಕ್ಕಿ | 05 |
| 30 | ಹುಳಿಮಾವು | 10 |
| 31 | ಆಗರಂ | 35 |
| 32 | ಚಿಕ್ಕಬೇಗೂರು | 5 |
| 33 | ಕೆ.ಅರ್.ಪುರಂ | 20 |
| 34 | ಹೆಣ್ಣೂರು | 01 |
| 35 | ವೃಷಭಾವತಿ ಕಣಿವೆ | 150 |
| | ಒಟ್ಟು | 1523.50 |